**4 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ದೊಡ್ಡಬಳ್ಳಾಪುರ**
**ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು**

**ಎಸ್.ಸಿ. ನಂಃ 10015/2019**

**ಚಾಸಾ ಃ 33**

**ಪ್ರಾಸಾ ಃ 9**

**ಹೆಸರು ಃ ಡಾ।। ವಿ ಅಬ್ದುಲ್ ರಹಮಾನ್ ಷರಿಫ್**
**ತಂದೆಯ ಹೆಸರು ಃ ಮೃತ ಅಬ್ದುಲ್ ಜಬ್ಬರ್**
**ವಯಸ್ಸು ಃ 40 ವರ್ಷ**
**ವೃತ್ತಿ ಃ ಸಹಾಯಕ ಪ್ರಾಧ್ಯಾಪಕರು, ಇಎಸ್ಐ ಆಸ್ಪತ್ರೆ, ಬೆಂಗಳೂರು**
**ವಾಸ ಃ ಬೆಂಗಳೂರು.**

**ಈ ದಿನ ದಿನಾಂಕಃ 09.11.2022 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**<u>ಮುಖ್ಯ ವಿಚಾರಣೆ ಸರ್ಕಾರಿ ಅಭಿಯೋಜಕರವರಿಂದ ಃ</u>**

1. ದಿನಾಂಕಃ 04.04.2015 ರಿಂದ 20.09.2020 ರ ವರೆಗೆ ನಾನು ದೊಡ್ಡಬಳ್ಳಾಪುರದ ಸರ್ಕಾರಿ ಆಸ್ಪತ್ರೆಯಲ್ಲಿ ವೈದ್ಯಾಧಿಕಾರಿಯಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

2. ದಿನಾಂಕಃ 08.01.2019 ರಂದು ನಾನು ಆಸ್ಪತ್ರೆಯಲ್ಲಿ ಕರ್ತವ್ಯದಲ್ಲಿದ್ದ ಸಮಯದಲ್ಲಿ ದೊಡ್ಡಬಳ್ಳಾಪುರ ನಗರ ಪೋಲಿಸ್ ಠಾಣೆಯ ಕ್ರೈಂ ನಂಬರ್ 2-2019ರ ಪ್ರಕರಣಕ್ಕೆ ಸಂಬಂಧಪಟ್ಟಂತೆ ಠಾಣಾ ಪಿ.ಸಿ 1521 ಟಿ.ಬಿ ನ್ಯಾಮೇಗೌಡ ಇವರು ದಿನಾಂಕ 7-01-2019ರ ರಾತ್ರಿ 9-45 ಗಂಟೆ ಸಮಯದಲ್ಲಿ ಕಬಾಬ್ ಆನಂದ ಮತ್ತು ಇತರರಿಂದ ಕರೇನಹಳ್ಳಿಯ ಕೊರಚನಹಟ್ಟಿಯ ಬಳಿ ಕೊಲೆಯಾದ ಎನ್. ಗಂಗಾಧರ ಇವರ ಶವ ಪರೀಕ್ಷೆಯನ್ನು ಮಾಡಿ ವರದಿ ನೀಡುವಂತೆ ಹಾಜರುಪಡಿಸಿದ ಮನವಿ ಪತ್ರದ ಮೇರೆಗೆ ಅದೇ ದಿನಾಂಕ ಮಧ್ಯಾಹ್ನ 2

ಗಂಟೆಯಿಂದ 4-30 ಗಂಟೆಯವರೆಗೆ ಸದರಿ ಗಂಗಾಧರ ಶವ ಪರೀಕ್ಷೆಯನ್ನು ಮಾಡಿ ವರದಿಯನ್ನು ನೀಡಿರುತ್ತೇನೆ.

3. ಸದರಿ ಶವವನ್ನು ಪರಿಶೀಲಿಸಿದಾಗ ಹೊರ ಚಹರೆಯು ಈ ಕೆಳಕಂಡಂತೆ ಇರುತ್ತದೆ.

A Young male adult dead body, well built and nourished measuring 5.6 inches height , oral faced wheatish brown in color wearing a blue jacket, stay blue colored T-shirt and a black night pant with yellow stripes a cement colored Levis-underwear All material are blad stained . The dead body is identified with multiple tattoo marks noted over left shoulder left Gvm, Right shoulder Arms and Right forearm-MSLR Rajamma written in Kannada. The Rigor mortis was noted in all four limbs with following injuries.

1. An open court wound noted over left parietal scalp region measuring 5c. x 1cm
2. An open cut oblique wound seen across right eye extending from right angle of eye to forehead upto right maxilla crossing right eye ball measuring 11cm x 2 ½ cm x 8 cm in depth.
3. A cut wound seen crossing left ear making in to two halves measuring 6 cm x 1cm.

4. A transverse open cut wound seen below left ear measuring 11 cm x 4cm x 5cm in depth bleeding of left ear, left nose,
5. A transverse open cut wound seen over left mandible 7x2x1 cm
6. An open cut wound noted over chin measuring 8cmx2cmx3cm
7. An open transverse cut wound noted below chin measuring 16x3x4 cm in depth running over left zygoma, left maxilla with fracture of left maxilla exposing soft tissue muscular and neurovascular tissue of fact.
8. An open cut wound noted over left wrist joint measuring 4x2x1cm
9. An open transverse cut wound noted over right shouler 10cm above right axilla measuring 5x2x4cm
10. An longitudinal wound noted next to would 9- 5cm medial to measuring 3x1x1cm
11. Multiple cut injuries 5 in Number measuring Each 2x2cmx2cm, 2 ½ x 2 ½ x 2 cm, 1cm (Circular)

0.5cm(Circular wound) x 0.7cm, (Circular) Depressed wounds

12. 3 Scratch injuries measuring 8cm x 7cmx 8cmxin 0.5 width respectively over left neck.
13. Multiple scratch injuries noted over left neck measuring 3x3 2 ½ x 2 ½ cm respectively
14. 3 Scratch injuries noted over left part of Anterior chest wall measuring 7, 10 x 12 cm x 0.5 cm in width respectively.

2.After examination of cranium and spinal canal it was found there was linear fracture of left parietal bone with intracranial hemorrhage noted in left parietal area,

3.Rest of the organs of Thorax, abdomen and genito urinary organs were intact.

4. Dead body along with cloths was handed back to respected Police personal to PC 1521 Nyamegowda

5. I am Opinion of cause of death is due to shock and hemorrahage due to blood lost and injury to whital organ is brain secondary to assault resulting in murder

4. ನಾನು ನೀಡಿದ ಶವ ಪರೀಕ್ಷಾ ವರದಿಯನ್ನು ಈಗ ನೋಡುತ್ತಿದ್ದೇನೆ ಅದನ್ನು ನಿಪಿ 27 ಎಂದು ಗುರುತಿಸಲಾಯಿತು. ಅದರಲ್ಲಿರುವ ನನ್ನ ಸಹಿಯನ್ನು ನೋಡಿ ಗುರುತಿಸುತ್ತೇನೆ. ಸಾಕ್ಷಿದಾರರು ತನ್ನ ಸಹಿಯನ್ನು ನೋಡಿ ಗುರುತಿಸಿದ್ದರಿಂದ ಅದನ್ನು ನಿಪಿ 27 (ಎ) ಎಂದು ಗುರುತಿಸಲಾಯಿತು.

5. ನಂತರ ದಿನಾಂಕ 30-01-2019ರಂದು ದೊಡ್ಡಬಳ್ಳಾಪುರದ ವೃತ್ತ ನಿರೀಕ್ಷಕರು ಸದರಿ ಮೃತ ಗಂಗಾಧರ ಅಲಿಯಾಸ್ ದಾಸ ಇವರ ಸಾವಿನ ಬಗ್ಗೆ ಆಯುಧವನ್ನು ಪರಿಶೀಲಿಸಿ ಸೃಷ್ಟಿಕರಣ ವರ ದಿಯನ್ನು ನೀಡುವಂತೆ ಕೋರಿ ಮನವಿ ಪತ್ರದೊಂದಿಗೆ ಬಿಳಿ ಬಟ್ಟೆಯ ಚೀಲದಲ್ಲಿ ಪ್ಯಾಕ್ ಮಾಡಿ ಎಸ್.ಬಿ ಅಕ್ಷರದಿಂದ ಮೊಹರು ಮಾಡಿದ ಕಬ್ಬಿಣದ ಮಚ್ಚನ್ನು ಕಳುಹಿಸಿ ಸದರಿ ಕಬ್ಬಿಣದ ಮಚ್ಚಿನಿಂದ ಗಂಗಾಧರ ಇವರಿಗೆ ಹೊಡೆದರೆ ಪಿ.ಎಮ್ ವರದಿಯಲ್ಲಿ ನಮೂದಿಸಿರುವ ಗಾಯಗಳು ಉಂಟಾಗುವ 6. ಸಾಧ್ಯತೆ ಇರುತ್ತದೆಯೇ ಎಂದು ಮತ್ತು ಸದರಿ ಗಾಯಗಳಿಂದ ಸಾವು ಸಂಭವಿಸುವ ಸಾಧ್ಯತೆ ಇರುತ್ತದೆಯಾ ಎಂಬ ಬಗ್ಗೆ ಪರಿಶೀಲಿಸಿ ಸೃಷ್ಟಿಕರಣ ವರದಿ ನೀಡುವಂತೆ ಕೋರಿದ್ದರು.

ಆ ಪ್ರಕಾರವಾಗಿ ಮೊಹರು ಮಾಡಿದ ಆಯುಧವನ್ನು ತೆರೆದು ಪರಿಶೀಲಿಸಲಾಗಿ ಅದು ಕಬ್ಬಿಣದ ಮಚ್ಚು ಆಗಿದ್ದು ಅದರ ಮೇಲೆ ರಕ್ತದ ಕಲೆಗಳು ಅಂಟಿದ್ದು

Handle-175cm in length x 3.8 cm with an inner halo continuing upto body of Axe x 8 cm circular measurement.

Body-Sharp Edge-36Cm curved surface

Blunt End- 45 cm in length curved surface x 1cm in breadth at center

Blood stains noted over one side 30cmx4cmx30cmx4cm with rusted stains.

Total width at the bottom of body -3.2cm.

Total width of the body at center-5.7cm.

Total width at the neck of Axe -2.5cm.

Blunt end and sharp edge merging together at the head of Axe

7. ಸದರಿ ಕಬ್ಬಿಣದ ಮಚ್ಚಿನಿಂದ ಗಂಗಾಧರ ಅಲಿಯಾಸ್ ದಾಸ ಅವರಿಗೆ ಹೊಡೆದರೆ ನನ್ನ ಪಿ.ಎಮ್ ವರದಿಯಲ್ಲಿ ನಮೂದಿಸಿರುವ ಸರಿ ಸುಮಾರು 14 ಗಾಯಗಳು ಆಗುವ ಸಾಧ್ಯತೆಗಳಿದ್ದು ಸದರಿ ಗಾಯಗಳಿಂದ ಗಂಗಾಧರ ಅಲಿಯಾಸ್ ದಾಸರವರ ಸಾವು ರಕ್ತಸ್ರಾವ ಮತ್ತು ಸಡನ್ ವ್ಯಾಸ್ಕುಲರ್ ಕೊಲಾಸ್ಸ್ ಆಗಬಹುದು ಎಂದು ಪಿ.ಎಮ್ ವರದಿಯಲ್ಲಿ ನಮೂದಿಸಿರುವಂತೆ ಸಾವು ಸಂಭವಿಸುವ ಸಾಧ್ಯತೆ ಇರುತ್ತದೆ ಎಂದು ವರದಿ ನೀಡಿರುತ್ತೇನೆ.

ಪರೀಕ್ಷಿಸಿದ ನಂತರ ಸದರಿ ಮಚ್ಚನ್ನು ಪುನಃ ಬಿಳಿ ಬಟ್ಟೆಯಿಂದ ಪ್ಯಾಕ್ ಮಾಡಿ ಮಾದರಿ ಸೀಲ್ ಹಾಕಿ ನನ್ನ ಸಹಿ ಮತ್ತು ಮೊಹರಿರುವ ಚೀಟಿಯನ್ನು ಅಂಟಿಸಿ ಸದರಿ ಆಯುಧವನ್ನು ಮತ್ತು ಪಿ.ಎಮ್ ವರದಿಯನ್ನು ಪಿ.ಸಿ 1527 ಎಮ್.ಕುಮಾರ್‌ರವರಿಗೆ ನೀಡಿರುತ್ತೇನೆ.

8. ಸದರಿ ವೃತ್ತ ನಿರೀಕ್ಷರು ಆಯುಧವನ್ನು ಪರಿಶೀಲಿಸಿ ಸ್ಪಷ್ಟಿಕರಣ ವರದಿ ನೀಡುವಂತೆ ನನಗೆ ಸಲ್ಲಿಸಿದ ಮನವಿ ಪತ್ರವನ್ನು ಈಗ ನೋಡುತ್ತಿದ್ದು ಅದನ್ನು ನಿಶಾನೆ ಪಿ 28 ಎಂದು ಗುರುತಿಸಲಾಯಿತು. ಅದರಲ್ಲಿರುವ ನನ್ನ ಸಹಿಯನ್ನು ನೋಡಿ ಗುರುತಿಸುತ್ತೇನೆ. ಸಾಕ್ಷಿದಾರರು ತನ್ನ ಸಹಿಯನ್ನು ನೋಡಿ ಗುರುತಿಸಿದ್ದರಿಂದ ನಿಶಾನೆ ಪಿ 28 (ಎ) ಎಂದು ಗುರುತಿಸಲಾಯಿತು.

9. ನಾನು ನೀಡಿದ ಸ್ಪಷ್ಟಿಕರಣ ವರದಿಯನ್ನು ಈಗ ನೋಡುತ್ತಿದ್ದು ಅದನ್ನು ನಿಶಾನೆ ಪಿ 29 ಎಂದು ಗುರುತಿಸಲಾಯಿತು. ಅದರಲ್ಲಿರುವ ನನ್ನ ಸಹಿಯನ್ನು ನೋಡಿ ಗುರುತಿಸುತ್ತೇನೆ. ಸಾಕ್ಷಿದಾರರು ತನ್ನ ಸಹಿಯನ್ನು ನೋಡಿ ಗುರುತಿಸಿದ್ದರಿಂದ ನಿಶಾನೆ ಪಿ 29 (ಎ) ಎಂದು ಗುರುತಿಸಲಾಯಿತು. ನನಗೆ ಪರೀಕ್ಷೆಗಾಗಿ ಕಳುಹಿಸಿದ ಆಯುಧವನ್ನು ಈಗ ನೋಡುತ್ತಿದ್ದು ಅದನ್ನು ಎಂ.ಓ 10 ಎಂದು ಈಗಾಗಲೇ ಗುರುತಿಸಲಾಗಿರುತ್ತದೆ.

10. ಶವಪರೀಕ್ಷೆಯ ಸಮಯದಲ್ಲಿ ಮೃತನ ಮೈಮೇಲೆ ಇದ್ದ ಬಟ್ಟೆಗಳನ್ನು ಇಂದು ನ್ಯಾಯಾಲಯದಲ್ಲಿ ನೋಡಿ ಗುರುತಿಸುತ್ತೇನೆ. ಅವುಗಳನ್ನು ಈಗಾಗಲೆ ಎಮ್.ಓ 3 ರಿಂದ 6 ಎಂದು ಗುರುತಿಸಲಾಗಿರುತ್ತದೆ.

**ಪಾಟೀ ಸವಾಲು ಆರೋಪಿತರ ಪರವಾಗಿ ಶ್ರೀ. ಟಿ.ಜಿ.ವಿ ವಕೀಲರಿಂದಃ**

ನನ್ನ ಪಿ.ಎಮ್ ವರದಿಯಲ್ಲಿ ಹೇಳಿದ ಗಾಯಗಳ ವಯಸ್ಸು/ಅವಧಿಯನ್ನು ಮತ್ತು ಸದರಿ ಗಾಯಗಳು ಮರಣದ ಪೂರ್ವದ ಅಥವಾ ನಂತರದ ಗಾಯಗಳೇ? ಎಂಬುದನ್ನು ನಮೂದಿಸಿರುವುದಿಲ್ಲ, ಶವಪರೀಕ್ಷಯ ಸಮಯದಲ್ಲಿ ಮೃತನ ಜಠರದಲ್ಲಿ ಆಲ್ಕೊಹಾಲ್ ಇತ್ತಾ ಅಥವಾ

ಇಲ್ಲ ಎಂದು ಪರೀಕ್ಷಿಸಿರುವುದಿಲ್ಲ ಕಾರಣ ಪರೀಕ್ಷಿಸಲು ಮನವಿ ಮಾಡದೇ ಇದ್ದುದರಿಂದ ಮಾಡಿರುವುದಿಲ್ಲ. ಶವ ಪರೀಕ್ಷೆಯ ಸಮಯದಲ್ಲಿ ಮೃತನ ಜಠರದಲ್ಲಿ ಆಲ್ಕೊಹಾಲ್ ಅಂಶ ಇದ್ದುದರಿಂದ ಬೇರೆಯವರ ಮಾತು ಕೇಳಿ ಪರೀಕ್ಷಿಸಿರುವುದಿಲ್ಲ ಮತ್ತು ವರದಿ ನೀಡಿರುವುದಿಲ್ಲ ಎಂದರೆ ಸರಿಯಲ್ಲ. ನನ್ನ ಪಿ.ಎಮ್ ವರದಿಯಲ್ಲಿ ಸದರಿ ಗಾಯಗಳು ಯಾವ ಆಯುಧದಿಂದ ಆಗಿರುತ್ತವೆ ಎಂದು ತಿಳಿಸಿರುವುದಿಲ್ಲ ಎಂದರೆ ಸರಿ.

ಸದರಿ ಮುದ್ದೆಮಾಲು 3 ರಿಂದ 6ನ್ನು ಪಿ.ಸಿ ನ್ಯಾಮೇಗೌಡರಿಗೆ ನೀಡಿದ ಬಗ್ಗೆ ಪ್ರತ್ಯೇಕವಾಗಿ ಹಿಂಬರಹ ಪಡೆದುಕೊಂಡಿರುವುದಿಲ್ಲ ಆದರೆ ಸ್ವೀಕರಿಸಿದ ಬಗ್ಗೆ ಪಿ.ಎಮ್ ವರ ದಿಯಲ್ಲಿ ಅವರ ಸಹಿಯನ್ನು ಪಡೆದುಕೊಂಡಿರುತ್ತೇನೆ. ಆ ರೀತಿ ಯಾವುದೇ ಸಹಿ ಪಡೆದುಕೊಂಡಿರುವುದಿಲ್ಲ ಎಂದರೆ ಸರಿಯಲ್ಲ. ವಾಪಸ್ಸು ನೀಡಿದ ಮೃತನ ಬಟ್ಟೆಗಳು ಇವೇ ಎಂದು ಹೇಳಲು ಅವಳ ಮೇಲೆ ಯಾವುದೇ ಗುರುತು ಹಾಕಿರುವುದಿಲ್ಲ. ಆದರೆ ನನ್ನ ಪಿ.ಎಮ್ ವರದಿಯಲ್ಲಿ ಬಟ್ಟೆಗಳ ಬಣ್ಣದೊಂದಿಗೆ ವಿಶ್ಲೇಷಣೆ ಮಾಡಿರುತ್ತೇನೆ. ಈಗ ನೋಡುತ್ತಿರುವ ಮುದ್ದೆಮಾಲು 10ನ್ನು ಪ್ಯಾಕ್ ಮಾಡಿದ ಬಿಳಿ ಬಟ್ಟೆಯ ಚೀಲದ ಮೇಲೆ ಎಸ್ ಬಿ ಎಂದು ಇರುವುದಿಲ್ಲ ಬಿ ಎಸ್ ಎಂದು ಇರುತ್ತದೆ ಎಂದರೆ ಸರಿ. ಈಗ ನೋಡುತ್ತಿರುವ ಮುದ್ದೆಮಾಲು 10ನ್ನು ಪ್ಯಾಕ್ ಮಾಡಿದ ಬಿಳಿ ಬಟ್ಟೆಯ ಚೀಲದ ಮೇಲೆ ನನ್ನ ಸಹಿ ಇರುವ ಚೀಟಿಯನ್ನು 2-2-2019ರಂದು ಅಂಟಿಸಿರುತ್ತೇನೆ. ಈಗ ನೋಡುತ್ತಿರುವ ಮುದ್ದೆಮಾಲು 10ನ್ನು ಪ್ಯಾಕ್ ಮಾಡಿದ ಬಿಳಿ ಬಟ್ಟೆಯ ಚೀಲದ ಮೇಲೆ ಇರುವ ಉಳಿದ 2 ಚೀಟಿಗಳು ನನಗೆ ಕಳುಹಿಸಿದ ಸಮಯದಲ್ಲಿ ಇದ್ದವೋ ಇಲ್ಲವೊ ಈಗ ನನಗೆ ಹೇಳಲು ಬರುವುದಿಲ್ಲ. ನಾನು ಪರೀಕ್ಷಿಸಿದ ಮಚ್ಚು ಇದೇ ಆಯುಧ ಎಂದು ಗುರುತಿಸಲು ಅದರ ಮೇಲೆ ಯಾವುದೇ ಗುರುತಿನ ಚೀಟಿಯನ್ನು ಅಂಟಿಸಿರುವು ದಿಲ್ಲ. ಸದರಿ ಮುದ್ದೆ ಮಾಲು 10ರ ತೂಕವನ್ನು ಮಾಡಿರುವುದಿಲ್ಲ.

ಈಗ ನೋಡುತ್ತಿರುವ ಮುದ್ದೆಮಾಲು 10ರ ಮೇಲೆ ರಕ್ತದ ಕಲೆಗಳು ಇರುತ್ತವೆ. ಅದರ ಮೇಲೆ ಯಾವುದೇ ರಕ್ತದ ಕಲೆಗಳು ಇರುವುದಿಲ್ಲ ಎಂದರೆ ಸರಿಯಲ್ಲ. ಮುದ್ದೆಮಾಲು 10ನ್ನು ನಾನು ಪರೀಕ್ಷಿಸುವ ಸಮಯದಲ್ಲಿ ಅದರ ಮೇಲಿದ್ದ ರಕ್ತದ ಕಲೆಗಳು ಎಷ್ಟು ಹಳೆಯ ರಕ್ತದ ಕಲೆಗಳು ಎಂದು ದಾಖಲಿಸಿರುವುದಿಲ್ಲ. ನನ್ನ ಪಿ.ಎಮ್ ವರದಿಯಲ್ಲಿ ಹೇಳಿದ ಗಾಯಗಳು ಮುದ್ದೆಮಾಲು 10ರ ಮಚ್ಚನ್ನು ಹೊರತುಪಡಿಸಿ ಬೇರೆ ಯಾವುದೇ ಹರಿತವಾದ ಆಯುಧಗಳಿಂದಲೂ ಆಗುವ ಸಾಧ್ಯತೆ ಇರುತ್ತದೆ ಎಂದರೆ ಸರಿ.

**<u>ಮರು ವಿಚಾರಣೆಃ</u>**

ಇಲ್ಲ.

ಓ ಹೇ ಕೇ ಸರಿ ಇದೆ

4 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ದೊಡ್ಡಬಳ್ಳಾಪುರ